# ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ

2ನೇ ಮಹಡಿ, ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡ, ಸಿಟಿ ಸಿವಿಲ್ ನ್ಯಾಯಾಲಯ ಸಂಕೀರ್ಣದ ಹತ್ತಿರ

ಕೆಂಪೇಗೌಡ ರಸ್ತೆ, ಬೆಂಗಳೂರು – 560 009. ದೂರವಾಣಿ : 2211 4233


'RPAD'

ಸಂಖ್ಯೆ.ಕೆಪಿಎಲ್‌ಸಿ/ಲೆಕ್ಕ/ಸಿಆರ್/37/2012–13 ದಿನಾಂಕ:20–06–2015

## ಅಧಿಕೃತ ಜ್ಞಾಪನ

ವಿಷಯ; ಸರ್ಕಾರಿ ಜಮೀನು ಒತ್ತುವರಿ ತೆರವು, ಸಂರಕ್ಷಣೆ ಹಾಗೂ ತಂತಿ ಬೇಲಿ ನಿರ್ಮಾಣಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:
1. ಜಿಲ್ಲಾಧಿಕಾರಿ ಮಂಡ್ಯ ಇವರ ಪತ್ರ ಸಂಖ್ಯೆ.ಒತ್ತುವರಿ/87/2013–14 ದಿ.28–02–2014.
2. ಜಿಲ್ಲಾಧಿಕಾರಿ ಮೈಸೂರು ಇವರ ಪತ್ರ ಸಂಖ್ಯೆ.ಎಲ್ಎನ್‌ಡಿ/(1)/ಸಿಆರ್/169 2010–11 ದಿ.18–10–2014.
3. ಜಿಲ್ಲಾಧಿಕಾರಿ ತುಮಕೂರು ಇವರ ಪತ್ರ ಸಂಖ್ಯೆ. ಎಲ್.ಎನ್.ಡಿ./ಟಿಎಫ್/ಸಿಆರ್/05/13–14 ದಿ.09–09–2014 ಮತ್ತು 18–02–2015.
4. ಜಿಲ್ಲಾಧಿಕಾರಿ ಬಾಗಲಕೋಟೆ ಇವರ ಪತ್ರ ಸಂಖ್ಯೆ.ಆರ್‌ಬಿ/ ಎಲ್ಎನ್‌ಡಿ/ಸಿಆರ್–95/13–14 ದಿನಾಂಕ:14–10–2014.

*****

ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮಕ್ಕೆ ಸರ್ಕಾರವು ಸರ್ಕಾರಿ ಜಮೀನುಗಳ ಒತ್ತುವರಿ ತೆರವು, ಸಂರಕ್ಷಣೆ ಹಾಗೂ ತಂತಿ ಬೇಲಿ ನಿರ್ಮಾಣಕ್ಕಾಗಿ ಯೋಜನಾ ವೆಚ್ಚವಾಗಿ ಲೆಕ್ಕ ಶೀರ್ಷಿಕೆ 2053–00–800–0–11–102 ಅಡಿಯಲ್ಲಿ ಪ್ರತಿ ವರ್ಷವು ಅನುದಾನವನ್ನು ಬಿಡುಗಡೆ ಮಾಡುತ್ತಿದೆ. ಈ ರೀತಿ ಬಿಡುಗಡೆ ಮಾಡಿದ ಅನುದಾನವನ್ನು ನಿಗಮದಿಂದ ಜಿಲ್ಲಾಧಿಕಾರಿಗಳ ಅಗತ್ಯತೆಯನ್ನು ಮನಗಂಡು ಮೇಲಿನ ಉದ್ದೇಶಕ್ಕಾಗಿ ಜಿಲ್ಲಾಧಿಕಾರಿಗಳಿಗೆ ಹಣ ಬಿಡುಗಡೆ ಮಾಡಲಾಗುವುದು.

ಮೇಲಿನ ಉಲ್ಲೇಖದಂತೆ ಜಿಲ್ಲಾಧಿಕಾರಿಗಳು ಸಲ್ಲಿಸಿರುವ ಪ್ರಸ್ತಾವನೆಗಳನ್ನು ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮವು ಪರಿಶೀಲಿಸಿದ್ದು, ಈ ಕೆಳಕಂಡಂತೆ ನಿಗಮದ ಚೆಕ್ಕುಗಳ ಮೂಲಕ ಹಣ ಬಿಡುಗಡೆ ಮಾಡಲಾಗಿದೆ.

ರವಾನಿಸಿದೆ
23/6/15

| ಕ್ರ.ಸಂ. | ಜಿಲ್ಲೆಯ ಹೆಸರು | ಬಿಡುಗಡೆ ಮಾಡಿದ ಮೊತ್ತ (ಲಕ್ಷ ರೂ.ಗಳಲ್ಲಿ) |
|---|---|---|
| 1. | ಮಂಡ್ಯ ಜಿಲ್ಲೆ | 50.00 |
| 2. | ಮೈಸೂರು ಜಿಲ್ಲೆ | 90.00 |
| 3. | ತುಮಕೂರು | 15.00 |
| 4. | ಬಾಗಲಕೋಟೆ | 10.00 |

ಸದರಿ ಅನುದಾನವನ್ನು ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಸರ್ಕಾರಿ ಜಮೀನು ಒತ್ತುವರಿ ತೆರವು, ಸಂರಕ್ಷಣೆ ಹಾಗೂ ತಂತಿಬೇಲಿ ನಿರ್ಮಾಣಕ್ಕಾಗಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಉಪಯೋಗಿಸಿಕೊಳ್ಳಲು ಅನುಮತಿ ನೀಡಿದೆ:

1. ಯಾವ ಉದ್ದೇಶಕ್ಕಾಗಿ ಅನುದಾನ ಬಿಡುಗಡೆ ಮಾಡಲಾಗಿದೆಯೋ ಆ ಉದ್ದೇಶಗಳಿಗಾಗಿ ಮಾತ್ರ ಬಳಸತಕ್ಕದ್ದು ಹಾಗೂ ಅನ್ಯ ಉದ್ದೇಶಗಳಿಗೆ ಬಳಸತಕ್ಕದ್ದಲ್ಲ;
2. ಈ ಅನುದಾನವನ್ನು ವೆಚ್ಚ ಮಾಡುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ, 1999 ಇದರ ನಿಯಮಗಳನ್ನು ತಪ್ಪದೇ ಪಾಲಿಸತಕ್ಕದ್ದು;
3. ಅನುದಾನ ಬಳಕೆ ಮಾಡಿದ ಬಗ್ಗೆ ಬಳಕೆ ಪ್ರಮಾಣ ಪತ್ರ ಹಾಗೂ ಕೈಗೊಂಡ ಕಾಮಗಾರಿಗಳ ಪಟ್ಟಿಯನ್ನು ಕಾಲಮಿತಿಯೊಳಗಾಗಿ ಈ ನಿಗಮಕ್ಕೆ ಸಲ್ಲಿಸತಕ್ಕದ್ದು;
4. ತಂತಿ ಬೇಲಿ ಕಾಮಗಾರಿಗಳನ್ನು ಕೈಗೊಳ್ಳುವಾಗ ಪ್ರಮುಖವಾಗಿ ನಗರ ಪ್ರದೇಶಗಳಲ್ಲಿ ಪದೇ ಪದೇ ಒತ್ತುವರಿಯಾಗುವ ಸಂಭವ ಇರುವ ಜಮೀನುಗಳಿಗೆ ಆದ್ಯತೆ ನೀಡತಕ್ಕದ್ದು.

…6.15

ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ
ಬೆಂಗಳೂರು

ಗೆ,
**ಜಿಲ್ಲಾಧಿಕಾರಿಗಳು,**
**ಮಂಡ್ಯ/ತುಮಕೂರು/ಮೈಸೂರು/ಬಾಗಲಕೋಟೆ ಜಿಲ್ಲೆ.**

ಪ್ರಧಾನ ವ್ಯವಸ್ಥಾಪಕರು
ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ



2